ಕಂಡಿಕೆ 8.6 (ಎ) – ಎಲ್ಲಾ ಹೊಸ ಕೈಗಾರಿಕಾ ಬಂಡವಾಳ ಹೂಡಿಕೆಯ ಸಾಧ್ಯವಿರುವಷ್ಟು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಹೆಚ್ಚುವರಿ ಉದ್ಯೋಗ ಅವಕಾಶಗಳನ್ನು ಕಲ್ಪಿಸಬೇಕಲ್ಲದೆ ಕನಿಷ್ಟ ಶೇ.80ರಷ್ಟು ಉದ್ಯೋಗವನ್ನು ಸ್ಥಳೀಯ ಜನರಿಗೆ ನೀಡತಕ್ಕದ್ದು. (ಸಿ ಮತ್ತು ಡಿ ಪ್ರವರ್ಗಗಳ ವಿಷಯದಲ್ಲಿ ಶೇ.100ರಷ್ಟು ಉದ್ಯೋಗ ಅವಕಾಶವನ್ನು ಸ್ಥಳೀಯ ಜನರಿಗೆ ನೀಡಬೇಕು). ಹಾಗೂ ಉತ್ತೇಜನಗಳನ್ನು ವಿತರಣೆ ಮಾಡುವಾಗ ಈ ವಿಚಾರದ ಮೇಲ್ವಿಚಾರಣೆ ನೋಡಿಕೊಳ್ಳತಕ್ಕದ್ದು.

ಸ್ಥಳೀಯ ಜನರಿಗೆ ಉದ್ಯೋಗ ನೀಡುವ ಅವಶ್ಯಕತೆಯನ್ನು ಜಿಲ್ಲಾ ಕೈಗಾರಿಕಾ ಕೇಂದ್ರಗಳು 5 ವರ್ಷಗಳವರೆಗೆ ಮೇಲ್ವಿಚಾರಣೆ ಮಾಡುತ್ತವೆ. ಕೈಗಾರಿಕೆಗಳು ಸ್ಥಳೀಯ ಜನರಿಗೆ ಮೇಲೆ ತಿಳಿಸಿದ ನಿಬಂಧನೆಗನುಸಾರವಾಗಿ ಉದ್ಯೋಗ ನೀಡಲು ತಪ್ಪಿದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುವ ರಾಜ್ಯಮಟ್ಟದ ಸಮಿತಿಗೆ ತಿಳಿಸಲಾಗುವುದು ಹಾಗೂ ಈ ಸಮಿತಿಯ ಮಂಜೂರಾದ ಬಂಡವಾಳ ಸಹಾಯಧನವನ್ನು ಮರುವಸೂಲಿ ಮಾಡಲು ಶಿಫಾರಸ್ಸು ಮಾಡುವುದು, ಇದಕ್ಕಾಗಿ ಸಹಾಯ ಧನವನ್ನು ವಿತರಣೆ ಮಾಡುವ ಮೊದಲು ಘಟಕಗಳಿಂದ ಮುಚ್ಚಳಿಕೆಯೊಂದನ್ನು ಪಡೆಯಲಾಗುವುದು.

2681 (3110) ಶ್ರೀ ನಿಂಗಪ್ಪ ಹೆಚ್. (ಕುಣಿಗಲ್) :– ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರಕ್ಕೆ ರೇಷ್ಮೆ ಇಲಾಖೆ ಮತ್ತು ಸರ್ಕಾರದಿಂದ ಒದಗಿಸಿರುವ ಹಣ ಎಷ್ಟು;

ಆ) ಪ್ರಾಧಿಕಾರದಿಂದ ಯಾವ ಯಾವ ಕಾರ್ಯಕ್ರಮಗಳ ಮೂಲಕ ರೇಷ್ಮೆ ಬೆಳೆಗಾರರಿಗೆ ಪ್ರಯೋಜನ ಒದಗಿಸಲಾಗಿದೆ;

ಇ) ಯಾವ ಯಾವ ವರ್ಗದ ಫಲಾನುಭವಿಗಳನ್ನು ಗುರುತಿಸಲಾಗಿದೆ;

ಈ) ರೇಷ್ಮೆ ಕೃಷಿ ಸಂಶೋಧನ ಕೇಂದ್ರವು (ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ) ಅಭಿವೃದ್ಧಿ ಪಡಿಸಿರುವ ತಾಂತ್ರಿಕತೆಗಳೇನು ಹಾಗೂ ಅವು ರೇಷ್ಮೆ ಬೆಳೆಗಾರರನ್ನು ಮುಟ್ಟುವಲ್ಲಿ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದರೆ ಸರ್ಕಾರದ ಮುಂದಿನ ಕ್ರಮವೇನು;

ಊ) ಸರ್ಕಾರದ ಸ್ವಾಮ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಯಾಗಿರುವ ಕೆ.ಎಸ್.ಐ.ಸಿ. ಸಂಸ್ಥೆಯನ್ನು ಪುನಶ್ಚೇತನಗೊಳಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?

ಶ್ರೀ ಸಿ. ಚನ್ನಿಗಪ್ಪ (ರೇಷ್ಮೆ ಸಚಿವರು) :

ಅ) ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರಕ್ಕೆ 1984–85ನೇ ಸಾಲಿನಿಂದ 2004–05ನೇ ಸಾಲಿನ ಫೆಬ್ರವರಿ ಅಂತ್ಯದವರೆಗೆ 206.08 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಆ) ರೇಷ್ಮೆ ಬೆಳೆಗಾರರಿಗೆ ಕೆಳಕಂಡ ಕಾರ್ಯಕ್ರಮಗಳ ಮೂಲಕ ಸಹಾಯ ಒದಗಿಸಲಾಗುತ್ತಿದೆ.

1) ಕೆಟಲಿಟಿಕ್ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಹಾಯಧನ

2) ಮೈಸೂರು ಬಿತ್ತನೆ ವಲಯದ ಬಿತ್ತನೆ ಬೆಳೆಗಾರರಿಗೆ ಬೋನಸ್

3) ದ್ವಿತಳಿ ಬಿತ್ತನೆ ಬೆಳೆಗಾರರಿಗೆ ಪ್ರೋತ್ಸಾಹಧನ

4) ರೋಗ ನಿಯಂತ್ರಣಕ್ಕಾಗಿ ಸೋಂಕು ನಿವಾರಕಗಳ ಸರಬರಾಜು

5) ಹೊಸ ಪ್ರದೇಶದ ಬೆಳೆಗಾರರು ಸ್ಥಳೀಯವಾಗಿ ಮಾರಾಟ ಮಾಡಿದ ಗೂಡಿಗೆ ಪ್ರೋತ್ಸಾಹಧನ

ಇ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸೌಲಭ್ಯಗಳನ್ನು ಒದಗಿಸಿದೆ.

ಈ) ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ತಲಘಟ್ಟಪುರ ರವರು ಅಭಿವೃದ್ಧಿ ಪಡಿಸಿರುವ ತಾಂತ್ರಿಕತೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅಭಿವೃದ್ಧಿ ಪಡಿಸಿದ ತಾಂತ್ರಿಕತೆಗಳ ಪ್ರಸರಣೆಯನ್ನು ಇಲಾಖೆಯು ಸ್ಥಾಪಿಸಿರುವ 246 ತಾಂತ್ರಿಕ ಸೇವಾಕೇಂದ್ರಗಳ ಸಿಬ್ಬಂದಿ ಮಾಡುತ್ತಿದ್ದಾರೆ.

6 ತರಬೇತಿ ಸಂಸ್ಥೆಗಳಲ್ಲಿ ರೇಷ್ಮೆ ಬೆಳೆಗಾರರಿಗೆ ತರಬೇತಿ ನೀಡಲಾಗುತ್ತಿದೆ. ವಿಚಾರಗೋಷ್ಠಿ, ಕಾರ್ಯಾಗಾರ, ಸ್ಥಳೀಯರಾಗಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ರೇಷ್ಮೆ ಬೆಳೆಗಾರರಿಗೆ ಹೊಸ ತಾಂತ್ರಿಕತೆಗಳ ಬಗ್ಗೆ ತಿಳುವಳಿಕೆ ನೀಡುವುದರ ಮೂಲಕ ಗುಣಮಟ್ಟದ ಸುಧಾರಣೆ, ಉತ್ಪಾದನಾ ವೆಚ್ಚ ಕಡಿಮೆ ಮಾಡುವ ಬಗ್ಗೆ ತಿಳಿಸಲಾಗುತ್ತಿದೆ. ಈ ಕ್ರಮಗಳಿಂದಾಗಿ ಹಿಂದಿನ ವರ್ಷಗಳಲ್ಲಿ ರಾಜ್ಯದಲ್ಲಿ ಬರ ಪರಿಸ್ಥಿತಿ ಇದ್ದರೂ ಉತ್ಪಾದಕತೆ ಹೆಚ್ಚಾಗಿರುವುದು ಕಂಡು ಬಂದಿದೆ.

ಉ) ಅಭಿವೃದ್ಧಿಪಡಿಸಲಾಗಿರುವ ಹೊಸ ತಾಂತ್ರಿಕತೆಗಳ ಅನುಸರಣೆಯನ್ನು ವ್ಯಾಪಕವಾಗಿ ರೇಷ್ಮೆ ಬೆಳೆಗಾರರಿಗೆ ತಲುಪಿಸಲಾಗುತ್ತಿದೆ.

ಊ) ಕೆ.ಎಸ್.ಐ.ಸಿ. ಈಗಾಗಲೇ ಪುನರ್ ರಚಿತವಾಗಿದೆ ಹಾಗೂ ಈಗ 2004–05ರ ಆರ್ಥಿಕ ವರ್ಷದಲ್ಲಿ ಕಾರ್ಯಾಚರಣೆ ಲಾಭ ತೋರಿಸಿದೆ.

ಅನುಬಂಧ

ಸಂಸ್ಥೆಯು ಅಭಿವೃದ್ಧಿಪಡಿಸಿರುವ ತಾಂತ್ರಿಕತೆಗಳು :

1. ಹಿಪ್ಪುನೇರಳೆ ತೋಟಕ್ಕೆ ಮಣ್ಣು ಪರೀಕ್ಷಾಧಾರಿತ ರಸಗೊಬ್ಬರಗಳ ಬಳಕೆ
2. ಹಿಪ್ಪುನೇರಳೆ ವ್ಯವಸಾಯದಲ್ಲಿ ಮಣ್ಣು ಪರೀಕ್ಷಾಧಾರಿತ ರಸಗೊಬ್ಬರಗಳ ಬಳಕೆಗಾಗಿ ಕೋಷ್ಟಕ
3. ಹಿಪ್ಪುನೇರಳೆ ತೋಟಗಳ ಮಣ್ಣಿನ ಫಲವತ್ತತೆಯ ನಕಾಶೆಗಳು ಮತ್ತು ಗೊಬ್ಬರಗಳ ಬಳಕೆ ಹಾಗೂ ಸುಧಾರಣೆ ಕ್ರಮಗಳು;
   i) ಕೃಷ್ಣರಾಜಪೇಟೆ
   ii) ಆನೇಕಲ್
   iii) ಕುಣಿಗಲ್
   iv) ಮಾಗಡಿ
   v) ಶಿಡ್ಲಘಟ್ಟ
   vi) ಚಿಂತಾಮಣಿ
4. ಸುಧಾರಿತ ಹಿಪ್ಪುನೇರಳೆ ತಳಿ "ವಿಶ್ವ" (ಡೆಹರಾಡೂನ್, ಡಿಡಿ)
5. ಸುಧಾರಿತ ಎರಡು ಹಿಪ್ಪುನೇರಳೆ ತಳಿಗಳು – "ಟಿಜಿ" (ತಲಘಟ್ಟಪುರ) ಮತ್ತು "ವಿಶಾಲ" (ಕುಕ್‌ಫಿಲ್ಲ)
6. ಹಿಪ್ಪುನೇರಳೆ ಎಲೆ ಬಿಳುಚುವಿಕೆಯ ನಿವಾರಣೆಗಾಗಿ ಎಲೆ ಸಿಂಪರಕ – "ಹರಿತ್"
7. ಹಿಪ್ಪುನೇರಳೆ ಬೇಸಾಯದಲ್ಲಿ ವರ್ಷಕ್ಕೆ 2–3 ಬಾರಿ ಕೊಟ್ಟಿಗೆ ಗೊಬ್ಬರದ ಅವಶ್ಯಕತೆ
8. ಉಷ್ಣ ಪ್ರದೇಶದಲ್ಲಿ ಬಾಕಿ ಹಿಪ್ಪುನೇರಳೆ ತೋಟಗಳ ನಿರ್ವಹಣೆ
9. "ಪ್ರಕೃತಿ" – ಹಿಪ್ಪುನೇರಳೆಗಾಗಿ ಸಾರಜನಕ ಸ್ಥಿರೀಕರಿಸುವ ಜೈವಿಕ ಗೊಬ್ಬರ
10. ಹಿಪ್ಪುನೇರಳೆಗೆ ಸಾರಜನಕ ಸ್ಥಿರೀಕರಿಸುವ ದಂಡಾಣು ತಳಿ "ಪ್ರಕೃತಿ–ಆರ್.ಎಫ್.ಬಿ"
11. 'ಸಿರಿಫಾಸ್' – ರಂಜಕವನ್ನು ಕರಗಿಸಿ ಹಿಪ್ಪುನೇರಳೆಗೆ ಒದಗಿಸುವ ಜೈವಿಕ ಗೊಬ್ಬರ ಮತ್ತು ಎರಡು ಸೂಕ್ಷ್ಮಾಣು ಜೀವಿ ತಳಿಗಳು ಎಂ.ಪಿ.ಎಂ–1 ಮತ್ತು ಎಂ.ಪಿ.ಎಂ–2
12. ಹಿಪ್ಪುನೇರಳೆಯ ಕಾಂಡದ ಕ್ಯಾಂಕರ್ – ನಿಯಂತ್ರಣ
13. ಹಿಪ್ಪುನೇರಳೆ ಬೇರಿನ ಕಪ್ಪುಕೊಳೆ ರೋಗ ಮತ್ತು ಸಮಗ್ರ ಹತೋಟಿ

14. ಹಿಪ್ಪುನೇರಳೆಯ ಗಂಟು ಬೇರು ರೋಗ ಮತ್ತು ಸಮಗ್ರ ಹತೋಟಿ
15. ಹೊಸ ಬೈವೋಲ್ಟಿಸ್ ತಳಿಗಳು – ಎನ್‌ಪಿ–2 ಮತ್ತು ಕೆಎಸ್‌ಓ–1
16. ಮಳೆಯಾಶ್ರಿತ ಮೈಸೂರು ಪ್ರದೇಶಕ್ಕೆ ಉತ್ತಮ ರೇಷ್ಮೆ ತಳಿ – ಸಿಎನ್ –2
17. ಲಿಂಗ ಸೀಮಿತ ಬಹುಸಂತತಿ ತಳಿ – ಎಸ್.ಎಲ್,– ಕೆ.ಎಸ್.ಪಿ.ಎಂ.
18. ಮೊಟ್ಟೆ ಹಾಳಿಗಳ ಸಂರಕ್ಷಣಾ ನಿಲುವು
19. ದ್ವಿತಳಿ ಮೊಟ್ಟೆಗಳ ಉಪಚಾರಕ್ಕೆ ನೂತನ ತಾಂತ್ರಿಕತೆಗಳು
20. ಬಹುಸಂತತಿ ಮತ್ತು ಮಿಶ್ರ ತಳಿ ಮೊಟ್ಟೆಗಳನ್ನು ಹೆಚ್ಚಿನ ದಿನಗಳವರೆಗೆ ಶೈತ್ಯೀಕರಿಸಿ ಸಂರಕ್ಷಿಸುವ ತಂತ್ರಜ್ಞಾನ
21. ರೇಷ್ಮೆ ಮೊಟ್ಟೆಗಳನ್ನು ಸಾಗಿಸುವ ಪೆಟ್ಟಿಗೆ
22. ರೇಷ್ಮೆ ಮೊಟ್ಟೆಗಳನ್ನು ಕತ್ತಲೆ ಉಪಚಾರಕ್ಕೆ ಅಳವಡಿಸಲು ಸರಳ ಕಪ್ಪುಪೆಟ್ಟಿಗೆ
23. ರೇಷ್ಮೆ ಮೊಟ್ಟೆ ಪರಿಪಾಕಣಿಕೆಗೆ ಮತ್ತು ಚಾಕಿ ಸೊಪ್ಪು ಶೇಖರಣೆಗೆ ಸರಳ ಮತ್ತು ಸೂಕ್ತ ವಿಧಾನ
24. ಕ್ಯಾಲುಕ್ಯುಲೇಟರ್‌ನಿಂದ ಮೊಟ್ಟೆ ಎಣಿಕೆ ಮಾಡುವ ಸಾಧನ
25. ಪ್ರತ್ಯೇಕತಾ ಪೆಟ್ಟಿಗೆಯಲ್ಲಿ ಚಾಕಿಹುಳು ಸಾಕಾಣಿಕೆ
26. ಚಾಕಿ ಹುಳುಗಳಿಗೆ ದಿನಕ್ಕೆ ಒಂದು ಬಾರಿ ಸೊಪ್ಪು ಕೊಡುವ ನೂತನ ವಿಧಾನ
27. ಹಿಪ್ಪುನೇರಳೆ ರೆಂಬೆಗಳಿಂದ ಬೆಳೆದ ರೇಷ್ಮೆ ಹುಳು ಸಾಕಣೆ ವಿಧಾನ
28. ರೇಷ್ಮೆ ಹುಳು ಸಾಕಣಿಕೆಯಲ್ಲಿ ಸ್ವಚ್ಛತೆ ಮತ್ತು ಸೋಂಕು ನಿವಾರಣಾ ವಿಧಾನಗಳು
29. ರೇಷ್ಮೆ ಹುಳುಗಳ ಸಾಕಾಣಿಕೆಯಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯತೆಯನ್ನು ಕಾಪಾಡಲು ಹೊಸ ಸೋಂಕು ನಿವಾರಕ "ಶುಚಿ"
30. ಹಾಲು ಮತ್ತು ಸಪ್ಪೆ ರೋಗಗಳ ನಿಯಂತ್ರಣಕ್ಕೆ ಹೊಸ ಔಷಧಿ – "ಸಂಜೀವಿನಿ"
31. ಸುಣ್ಣಕಟ್ಟು ರೋಗ ನಿಯಂತ್ರಣಕ್ಕೆ ಹೊಸ ಔಷಧಿ –"ಸುರಕ್ಷ"
32. ರೇಷ್ಮೆ ಹುಳುವಿನ ಹಿಕ್ಕೆಯಲ್ಲಿ ಗಂಟು ರೋಗದ ರೋಗಾಣುಗಳನ್ನು ಪತ್ತೆ ಹಚ್ಚುವ ವಿಧಾನ
33. ಗಂಟು ರೋಗವನ್ನು ಗುರುತಿಸಲು "ನೆಗೆಟಿವ್ ಸ್ಟೈನಿಂಗ್" ವಿಧಾನ

34. ತಾಯಿ ಚಿಟ್ಟೆಯಿಂದ ಮೊಟ್ಟೆಯ ಮೂಲಕ ಹರಡುವ ಗಂಟು ರೋಗವನ್ನು ಖಚಿತವಾಗಿ ಕಂಡು ಹಿಡಿಯುವ ಹೊಸ ವಿಧಾನ –ತಾಯಿ ಚಿಟ್ಟೆಯ ರೆಕ್ಕೆ ಮತ್ತು ತಳಭಾಗದ ಅಂಗಾಂಶವನ್ನು ಪರೀಕ್ಷಿಸುವುದು.

35. ರೇಷ್ಮೆ ಹುಳುಗಳಿಗೆ ಶಿಲೀಂಧ್ರಗಳಿಂದುಂಟಾಗುವ ಹೊಸ ಬಗೆಯ ರೋಗ "ಆಸ್ಪರ್ ಜಿಲ್ಲೋಸಿಸ್" ಮತ್ತು ಅದರ ನಿಯಂತ್ರಣ.

36. ರೇಷ್ಮೆ ಹುಳುವಿನ ಕೆಂಚು ಸಪ್ಪೆರೋಗ ಮತ್ತು ನಿಯಂತ್ರಣ.

37. ನೂತನ ರಾಸಾಯನಿಕ (ಊಚಿ ಪುಡಿ)ವನ್ನು ಉಪಯೋಗಿಸಿ ಊಚಿ ನೊಣದ ಹತೋಟಿ.

38. ಬಿತ್ತನೆ ಕೋಠಿಗಳಲ್ಲಿ ಹಾನಿಕಾರಕ ಕೀಟಗಳ ನಿಯಂತ್ರಣ

39 ಹಿಪ್ಪುನೇರಳೆ ಸುರುಳಿ ಕೀಟದ ಹಾವಳಿ ಮತ್ತು ಅದರ ನಿರ್ವಹಣೆ

40 ಸೋಂಕು ನಿವಾರಣೆ ಮತ್ತು ಸ್ವಚ್ಛತೆಗಾಗಿ ಬಹು ಉಪಯೋಗಿ ಪಂಪು

41. ಹಿಪ್ಪು ನೇರಳೆ ಸೊಪ್ಪು ಕತ್ತರಿಸುವ ಯಂತ್ರ

42. ನೂಲು ಬಿಚ್ಚುವ ತಂತ್ರಜ್ಞಾನಗಳು :

    i) ಬಿಸಿಗಾಳಿಯಿಂದ ಗೂಡುಗಳನ್ನು ಒಣಗಿಸುವ ವಿಧಾನ

    ii) ಗೂಡುಗಳ ಶೇಖರಣೆ ಮತ್ತು ಪರಿಷ್ಕರಣೆಯ ತಾಂತ್ರಿಕತೆ

    iii) ಗೂಡುಗಳನ್ನು ವಿಂಗಡಿಸುವಿಕೆಯ ವಿಧಾನ

    iv) ಕ್ರಾಯ್‌ಶರನ ಉದ್ದ

    v) ನೂಲು ಬಿಚ್ಚುವ ವೇಗದ ಮಿತಿ

    vi) ಮರು ಸುತ್ತಾಣಿಕೆಯಲ್ಲಿ ಸಂಸ್ಕರಣಾ ಅಂಶಗಳು

    vii) ರೇಷ್ಮೆ ನೂಲು ಬಿಚ್ಚಾಣಿಕೆ ನೀರಿನ ಸಂರಕ್ಷಣಾ ತಂತ್ರಜ್ಞಾನ

43. ಗೂಡು ಬೇಯಿಸುವ ಉಪಕರಣ

44. ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ಡೀನಿಯರ್ ಸೂಚಕ

45. ಲೋಹದ ಬಟನ್

46. ರೇಷ್ಮೆ ದಾರ ನೆನೆಹಾಕುವಿಕೆಯ ತಂತ್ರಜ್ಞಾನ

47. ರೇಷ್ಮೆ ಹುರಿ ಸ್ಥಿರಗೊಳಿಸುವಿಕೆ

48. ಉತ್ತಮ ಗುಣಮಟ್ಟದ ಕ್ರೇಪ್ ವಸ್ತ್ರವನ್ನು ತಯಾರಿಸುವಿಕೆ
49. ಕೊರೆದ ಗೂಡಿನಿಂದ ನೂಲುವ ಯಂತ್ರ
50. ಬಿಸು ಪ್ರತ್ಯೇಕಿಸುವ ಯಂತ್ರ
51. ರೇಷ್ಮೆ ಸಂಸ್ಕರಣೆಗಾಗಿ ನೀರಿನ ಉಪಚಾರ
52. ರೇಷ್ಮೆ ಸಂಸ್ಕರಣೆಯಲ್ಲಿ ಉಪಯೋಗಿಸುವ ರಾಸಾಯನಿಕಗಳ ಶೇಖರಣೆ ಮಾಡುವ ವಿಧಾನದಿಂದಾಗುವ ಪರಿಣಾಮಗಳು
53. ರೇಷ್ಮೆ ಅಂಟು ತೆಗೆಯಲು ಮಾದರಿ ವಿಧಾನ
54. ಸಂಸ್ಥೆಯಲ್ಲಿ ದೊರೆಯುವ ಸೇವಾ ಸೌಲಭ್ಯಗಳು
55. "ಸಿರಿ ಬಯೋಗಾರ್ಡ್" ಬೇರುಕೊಳೆ, ಕಾಂಡದ ಕ್ಯಾಂಕರ್ ರೋಗಕ್ಕಾಗಿ ಜೈವಿಕ ನಿಯಂತ್ರಕ
56. "ಸಿರಿ ನೆಮೆಟೋಗಾರ್ಡ್" ಗಂಟು ಬೇರು ರೋಗಕ್ಕಾಗಿ ಜೈವಿಕ ನಿಯಂತ್ರಕ
57. "ಸಿರಿ ಮಿಲ್ಲೊಗಾರ್ಡ್" ಸಸ್ಯ ಜನ್ಯ ಬೂದಿರೋಗ ನಿಯಂತ್ರಕ
58. "ಸಿರಿ ವ್ಯಾಮ್" ಬೇರುಗಳಿಗೆ ರಂಜಕ ಒದಗಿಸುವ ಜೈವಿಕ ಗೊಬ್ಬರ
59. "ಸಿರಿ ಕಾಂಪೋರಿಚ್" ಕಾಂಪೋಸ್ಟ್ ತಯಾರಿಸಲು ನೆರವಾಗುವ ಸೂಕ್ಷ್ಮಾಣು ಜೀವಿ
60. "ಸಿರಿ ಮಲ್ಟಿಪಾಸ್" ಮಣ್ಣಿನ ರಂಜಕವನ್ನು ಸಸ್ಯಕ್ಕೆ ಒದಗಿಸುವ ಜೈವಿಕ ಗೊಬ್ಬರ
61. "ಸಿರಿ ಪ್ರಕೃತಿ" ಸಾರಜನಕ ಸ್ಥಿರೀಕರಣ ಸಸ್ಯಕ್ಕೆ ಒದಗಿಸುವ ಜೈವಿಕ ಗೊಬ್ಬರ
62. "ಕ್ಲೋರೋಪೆಕ್ಟ್" ರೇಷ್ಮೆ ಹುಳು ಸಾಕಣೆಯಲ್ಲಿ ಬಳಸುವ ಸೋಂಕು ನಿವಾರಕ
63. "ಸ್ಯಾನಿಟಾಲ್ ಪ್ಲಸ್" ರೇಷ್ಮೆ ಹುಳು ಸಾಕಣೆಯಲ್ಲಿ ಬಳಸುವ ಮತ್ತೊಂದು ಸೋಂಕು ನಿವಾರಕ
64. "ಚೇತನ" ರೇಷ್ಮೆ ಹುಳುಗಳನ್ನು ಒಂದೇ ಸಮವಾಗಿ ಹಣ್ಣಾಗಿಸುವ ಸಸ್ಯಜನ್ಯ ಪ್ರಚೋದಕ
65. "ಚಾಪ್‌ಸ್ಟಿಕ್" ಚಾಕಿ ಸಾಕಣೆಯಲ್ಲಿ ಬಳಸುವ ಸುರಕ್ಷಿತ ಕಡ್ಡಿಗಳು
66. "ಅನಿಲ ಜ್ವಾಲಕ" ಚಂದ್ರಿಕೆಗಳನ್ನು ಸ್ವಚ್ಛಗೊಳಿಸುವ ಉಪಕರಣ